# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 466
ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಕುಮಾರ್.ಕೆ.
(ನಾಮ ನಿರ್ದೇಶಿತರ ಕ್ಷೇತ್ರ)
ಉತ್ತರಿಸುವ ದಿನಾಂಕ : 11/12/2025
ಉತ್ತರಿಸುವ ಸಚಿವರು: : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕನ್ನಡ ಡಿಜಿಟಲ್ ಪತ್ರಿಕೋದ್ಯಮದ ಬೆಳವಣಿಗೆಗೆ ಪೂರಕವಾಗಿ, ಹಳೆಯ ಮತ್ತು ನಂಬಿಗಸ್ತ ಪೋರ್ಟಲ್‌ಗಳನ್ನು ತಪ್ಪದೇ ಒಳಗೊಳ್ಳುವಂತೆ ಪಾಲಿಸಿಯಲ್ಲಿ ತಿದ್ದುಪಡಿ ಮಾಡುವ ಸಾಧ್ಯತೆಗಳೇನು: | ಕನ್ನಡ ಡಿಜಿಟಲ್ ಪತ್ರಿಕೋದ್ಯಮದ ಬೆಳವಣಿಗೆಗೆ ಪೂರಕವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಇ-ಮೇಲ್ ಪಟ್ಟಿಯಲ್ಲಿ ಹಳೆಯ ಮತ್ತು ನಂಬಿಗಸ್ತ ವೆಬ್‌ಸೈಟ್/ ಪೋರ್ಟಲ್‌ಗಳ ವಿಳಾಸಗಳೂ ಇದ್ದು, ಅವುಗಳಿಗೆ ನಿರಂತರವಾಗಿ ಸುದ್ದಿ ಹಾಗೂ ಸರ್ಕಾರದ ಕಾರ್ಯಕ್ರಮಗಳ ಮಾಹಿತಿಯನ್ನು ಹಂಚಿಕೊಳ್ಳಲಾಗುತ್ತಿದೆ.<br><br>ಡಿಜಿಟಲ್ ಮಾಧ್ಯಮಗಳಿಗೆ ಜಾಹೀರಾತು ಬಿಡುಗಡೆ ಸಂಬಂಧ "ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ 2024" ಅನ್ನು ಈಗಾಗಲೇ ಜಾರಿಗೆ ತರಲಾಗಿದ್ದು ಪ್ರಸ್ತುತ ಇದಕ್ಕೆ ತಿದ್ದುಪಡಿ ಮಾಡುವ ಅವಶ್ಯಕತೆ ಇರುವುದಿಲ್ಲ. |
| ಆ) | ಸರ್ಕಾರದ ತನ್ನ ಇಲಾಖೆಗಳ ಸುದ್ದಿಗಳನ್ನು ವ್ಯಾಪಕವಾಗಿ ತಲುಪಿಸಲು ದೀರ್ಘಕಾಲದಿಂದ ಸೇವೆ ನೀಡುತ್ತಿರುವ ಪೋರ್ಟಲ್‌ಗಳಿಗೆ 'Priority Release List' ಸೌಲಭ್ಯ ನೀಡಲು ಸಿದ್ಧವಿದೆಯೇ : | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧೀನ ಕಚೇರಿಗಳು ಸೇರಿದಂತೆ, ಕೇಂದ್ರ ಕಚೇರಿಯಿಂದ ಸರ್ಕಾರದ ಅಧಿಕೃತ ಸಭೆ-ಸಮಾರಂಭ ಮತ್ತು ಕಾರ್ಯಕ್ರಮಗಳ/ ಪತ್ರಿಕಾ ಪ್ರಕಟಣೆ ಸೇರಿದಂತೆ ಸುದ್ದಿ ಮತ್ತು ಛಾಯಾಚಿತ್ರಗಳನ್ನು ಕಾರ್ಯಕ್ರಮ ಮುಕ್ತಾಯದ ಬಳಿಕ, ಆಯಾ ದಿನವೇ ಡಿಜಿಟಲ್ ರೂಪದಲ್ಲಿ ಏಕ ಕಾಲಕ್ಕೆ ಎಲ್ಲಾ ಮಾಧ್ಯಮಗಳಿಗೆ ಬಿಡುಗಡೆ ಮಾಡಲಾಗುವುದರಿಂದ ಪ್ರತ್ಯೇಕವಾಗಿ ಆದ್ಯತೆಯ ಮೇರೆಗೆ ಸುದ್ದಿ ಪೋರ್ಟಲ್‌ಗಳಿಗೆ ಸುದ್ದಿ/ ಛಾಯಾಚಿತ್ರಗಳನ್ನು ಕಳುಹಿಸುವ ಅವಶ್ಯಕತೆ ಇರುವುದಿಲ್ಲ. |
| ಇ) | ಹಿರಿತನ ಆಧಾರವಾಗಿ ನ್ಯೂಸ್ ಪೋರ್ಟಲ್‌ಗಳಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕೃತ ಕಾರ್ಯಕ್ರಮ ಮಾಹಿತಿ, ಸರ್ಕಾರದ ವರದಿಗಳು ಮೊದಲಾದವು - ಗಳಿಗೆ ನೇರ ಹಾಗೂ ಆಧ್ಯತಾ ಪ್ರವೇಶ ಕಲ್ಪಿಸುವ ಯೋಜನೆ ಇದೆಯೇ : | ಸರ್ಕಾರದ ಅಧಿಕೃತ ಸಭೆ ಸಮಾರಂಭ ಕಾರ್ಯಕ್ರಮಗಳಿಗೆ ನಿಯಮಾನುಸಾರ ಪತ್ರಿಕಾ ಮಾನ್ಯತಾ ಪತ್ರ ಹೊಂದಿರುವವರಿಗೆ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ. |

| | | |
|---|---|---|
| ಈ) | ಜಾಹಿರಾತು ಹಂಚಿಕೆಯಲ್ಲಿ ಪಾರದರ್ಶಕತೆಗಾಗಿ ಡಿಜಿಟಲ್ ಪೋರ್ಟಲ್‌ಗಳ ಹಳೆಯ ದಾಖಲೆ, ರೀಚ್ ಮತ್ತು ನಂಬಿಕೆಯನ್ನು ಪರಿಗಣಿಸುವ ಸ್ವಯಂಚಾಲಿತ ವಿಧಾನ ಅಳವಡಿಸುವ ಕುರಿತು ಸರ್ಕಾರದ ಯೋಜನೆ ಏನು : | ಸುದ್ದಿ ಪೋರ್ಟಲ್‌ಗಳಿಗೆ ಜಾಹೀರಾತು ನೀಡಲು ಡಿಜಿಟಲ್ ಜಾಹೀರಾತು ಮಾರ್ಗಸೂಚಿ-2024 ಅನ್ನು ಜಾರಿಗೆ ತರಲಾಗಿದ್ದು, ಡಿಜಿಟಲ್ ಮಾಧ್ಯಮಗಳು ಹೊಂದಿರುವ ವೀಕ್ಷಕರ ಸಂಖ್ಯೆಗನುಗುಣವಾಗಿ ಕೇಂದ್ರ ಸರ್ಕಾರದ BOC (DAVP) ನಿಗದಿ ಪಡಿಸಿರುವ ಕ್ಯಾಟಗರಿ ಅನ್ವಯ ಜಾಹೀರಾತು ದರಗಳನ್ನು ನಿಗದಿಪಡಿಸಲಾಗುತ್ತಿದ್ದು, ಅದರಂತೆ ಇಲಾಖೆ ಅಗತ್ಯ ಸಂದರ್ಭಗಳಲ್ಲಿ ಡಿಜಿಟಲ್ ಮಾಧ್ಯಮಗಳಿಗೆ ಪಾರದರ್ಶಕವಾಗಿ ಜಾಹೀರಾತು ಬಿಡುಗಡೆ ಮಾಡಲಾಗುವುದು ಹಾಗೂ ಇಲಾಖೆಯಲ್ಲಿ ಎಂಪ್ಯಾನಲ್ ಆಗುವ ಡಿಜಿಟಲ್ ಜಾಹೀರಾತು ಸಂಸ್ಥೆಗಳಿಗೆ ನಿಯಮಾನುಸಾರ ಜಾಹೀರಾತು ನೀಡಲು ಪರಿಗಣಿಸಲಾಗುತ್ತದೆ. |
| ಉ) | ಕನ್ನಡ ಮಾಧ್ಯಮ ಕ್ಷೇತ್ರದ ಬೆಳವಣಿಗೆಗೆ ದೀರ್ಘಕಾಲದ ಸೇವೆ ನೀಡಿರುವ ಸ್ಥಳೀಯ ಡಿಜಿಟಲ್ ಫ್ಲಾಟ್‌ಫಾರ್ಮ್ ಗಳಿಗೆ ನಿಖರವಾದ ಸೌಲಭ್ಯಗಳನ್ನು ನಿಗದಿಪಡಿಸಲು ಸರ್ಕಾರದಿಂದ Stakeholder Consultation ನಡೆಸುವ ಬಗ್ಗೆ ಯಾವುದೇ ವೇಳಾಪಟ್ಟಿ ಇದೆಯೇ? | ಡಿಜಿಟಲ್ ಮಾಧ್ಯಮಗಳಿಗೆ ಸರ್ಕಾರದಿಂದ Stake holder Consultation ನಡೆಸುವ ಬಗ್ಗೆ ಸದ್ಯಕ್ಕೆ ಯಾವುದೇ ವೇಳಾ ಪಟ್ಟಿ ಇರುವುದಿಲ್ಲ . |

**ಸಂಖ್ಯೆ:ಕೆಸಿಐ-ಪಿಐಪಿ/288/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ